೪) ಗ್ರೂಪ್ - ಡಿ ೬೦೭

ಒಟ್ಟು	೩,೨೭೩

ಆ) ನೌಕರರ ನಿಯಮಿತ ಹಾಜರಾತಿ ಬಗ್ಗೆ ಕಟ್ಟು ನಿಟ್ಟಾಗಿ ಪಾಲಿಸುವಂತೆ ಆಗಿಂದಾಗ್ಗೆ ಸುತ್ತೋಲೆಗಳ ಮೂಲಕ ಸೂಚನೆಗಳನ್ನು ನೀಡಲಾಗುತ್ತಿದೆ. ಸೂಚನೆಗಳನ್ನು ಉಲ್ಲಂಘಿಸಿದ ನೌಕರರ ಮೇಲೆ ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳು ಕ್ರಮ ಜರುಗಿಸುತ್ತಾರೆ. ಇಂತಹ ಪ್ರಕರಣಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಒದಗಿಸಲಾಗುವುದು.

ಇ) ತೆಗೆದುಕೊಂಡಿರುವ ಕ್ರಮವನ್ನು ಎಲ್ಲಾ ಇಲಾಖೆಗಳಿಂದ ಸಂಗ್ರಹಿಸಿ ಒದಗಿಸಲಾಗುವುದು.

ಅಂಬೇಡ್ಕರ್ ಶತಮಾನೋತ್ಸವ ಅಂಗವಾಗಿ ಖೈದಿಗಳನ್ನು ಬಿಡುಗಡೆ ಮಾಡುವುದರ ಬಗ್ಗೆ

೧೪೬೩. (೨೨೨೪) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂಬೇಡ್ಕರ್ ಶತಮಾನೋತ್ಸವದ ಅಂಗವಾಗಿ ಖೈದಿಗಳನ್ನು ಅವರ ಶಿಕ್ಷೆಯ ಅವಧಿ ಮುಗಿಯುವುದಕ್ಕಿಂತ ಮೊದಲೇ ವಿಶೇಷ ಸಂದರ್ಭ ಇದ್ದುದರಿಂದ ಅವರನ್ನು ಬಿಡುಗಡೆ ಮಾಡಲು ಸರ್ಕಾರದವರು ಯೋಚಿಸಿರುವರೇ?

ಆ) ರಾಜ್ಯದಲ್ಲಿ ಎಷ್ಟು ಜನ ಖೈದಿಗಳು ಜೀವಾವಧಿ ಶಿಕ್ಷೆ ಹೊಂದಿದ ಮತ್ತು ಫಾಸಿಗೆ ಆರ್ಡರ್ ಮಾಡಿದ ಖೈದಿಗಳು ಇರುವರು? (ಇವರು ಯಾವ ಯಾವ ಜೈಲಿನಲ್ಲಿ ಎಷ್ಟು ಎಷ್ಟು ಜನರು ಇರುವರು. ವಿವರವಾಗಿ ಜೈಲಿನ ಹೆಸರು ಸಹಿತ ಕೊಡುವುದು).

ಇ) ವಿವಿಧ ರಾಜ್ಯಗಳಲ್ಲಿ ಅಂಬೇಡ್ಕರ್ ಶತಮಾನೋತ್ಸವದ ಅಂಗವಾಗಿ ಶಿಕ್ಷೆಗೊಳಗಾದ ಖೈದಿಗಳಿಗೆ ವಿಶೇಷ ರಿಯಾಯಿತಿ ಕೊಟ್ಟು ಅವರನ್ನು ಅವಧಿ ಪೂರ್ವಕ್ಕಿಂತ ಮೊದಲೇ ಬಿಡುಗಡೆ ಮಾಡಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರದವರು ಇವರನ್ನು ಸಹ ಅವಧಿಪೂರ್ವ ಬಿಡುಗಡೆ ಮಾಡಲು ಶ್ರಮ ಕೈಗೊಳ್ಳುವರೆ?

ಶ್ರೀ ಡಿ. ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು):-

ಅ) ಹೌದು. ಈ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿದ್ದು ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ೧೧ ಜನ ಖೈದಿಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ರಾಜ್ಯದಲ್ಲಿ ಫಾಸಿಗೆ ಆರ್ಡರ್ ಮಾಡಿದ (ಮರಣ ದಂಡನೆಗೆ ಗುರಿಯಾದ) ಖೈದಿಗಳು ಯಾರೂ ಇರುವುದಿಲ್ಲ.

ದಿನಾಂಕ ೨೯-೨-೧೯೯೨ ರಂದು ರಾಜ್ಯದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾದವರ ಒಟ್ಟು ಸಂಖ್ಯೆ ೪೪೨ ಇರುತ್ತದೆ. ಸದರಿ ಬಂಧಿಗಳು ಈ ಕೆಳಗೆ ನಮೂದಿಸಿರುವ ಕಾರಾಗೃಹಗಳಲ್ಲಿದ್ದಾರೆ:-

ಕ್ರಮ ಸಂಖ್ಯೆ	ಜೈಲಿನ ಹೆಸರು ಮತ್ತು ಊರಿನ ಹೆಸರುಗಳು	ಗಂ	ಹೆಂ	ಒಟ್ಟು
೧.	ಕೇಂದ್ರ ಕಾರಾಗೃಹ, ಬೆಂಗಳೂರು	೨೨೦	೧೨	೨೩೨
೨.	ಕೇಂದ್ರ ಕಾರಾಗೃಹ, ಬೆಳಗಾಂ	೨೪೨	೫	೨೪೭
೩.	ಕೇಂದ್ರ ಕಾರಾಗೃಹ, ಬಳ್ಳಾರಿ	೫೧	೧	೫೨
೪.	ಕೇಂದ್ರ ಕಾರಾಗೃಹ, ಬಿಜಾಪುರ	೫೫	—	೫೫
೫.	ಕೇಂದ್ರ ಕಾರಾಗೃಹ, ಗುಲ್ಬರ್ಗಾ	೧೩೨	೨	೧೩೪
೬.	ಕೇಂದ್ರ ಕಾರಾಗೃಹ, ಮೈಸೂರು	೬೪	೨	೬೬
೭.	ಜಿಲ್ಲಾ ಕಾರಾಗೃಹ, ಶಿವಮೊಗ್ಗ	೧	—	೧
೮.	ಜಿಲ್ಲಾ ಕಾರಾಗೃಹ, ರಾಯಚೂರು	೨	—	೨
೯.	ಜುವೆನೈಲ್ ಜೈಲು, ಧಾರವಾಡ	೧೬	—	೧೬
೧೦.	ಬಯಲು ಬಂಧೀಖಾನೆ, ಕೋರಮಂಗಲ	೩೭	—	೩೭
	ಒಟ್ಟು	೪೨೦	೨೨	೪೪೨

೫) ಇಲ್ಲ.

ಈ) ಪರಿಶೀಲನೆ ಮಾಡಲಾಗುತ್ತಿದೆ.

ಬೈಲಹೊಂಗಲ ನಗರದ ಬಡಾವಣೆಯಲ್ಲಿ ಕುಡಿಯುವ ನೀರಿನ ತೊಂದರೆಯಿರುವುದರ ಬಗ್ಗೆ

೧೪೪೪ (೨೨೪೯) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದ ಬಡಾವಣೆಯಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ೨೦ ಬೋರ್‌ವೆಲ್‌ಗಳನ್ನು ಅಭಾವ ನಿಧಿ ಹಣದಿಂದ ತೋಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ) ಮೇ ೧೯೯೧ರಲ್ಲಿ ೪ ಕೊಳವೆ ಬಾವಿಗಳನ್ನು ತೋಡಲಾಗಿದೆ. ೩ ಹೆಚ್ಚು ಇಳುವರಿ ಇರುತ್ತವೆ. ಈ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪು ಹಾಗೂ ಪೈಪ್ ಲೈನ್ ಹಾಕಲು ಜಿಲ್ಲಾಧಿಕಾರಿ, ಬೆಳಗಾವಿಯವರು ೩.೮೩ ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿದ್ದಾರೆ. ಅವಶ್ಯಕತೆ ಬಂದರೆ ಇನ್ನೂ ಹೆಚ್ಚು ಕೊಳವೆ ಬಾವಿಗಳನ್ನು ತೋಡಲಾಗುವುದು.